6) ಮೆ ಶೆಟ್ಟಿ ಕನಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಹುಬ್ಬಳ್ಳಿ
7) ಮೆ ಪಿ ದಶರಥ ರಾಮ ರೆಡ್ಡಿ, ಬೆಂಗಳೂರು
8) ಮೆ ಲ್ಯಾಂಡ್‌ಆರ್ಮೀ ಕಾರ್ಪೋರೇಷನ್, ಕಾರವಾರ
9) ಮೆ ಸ್ಟೀಟ್ ಹೋಮ್ ಕನ್‌ಸ್ಟ್ರಕ್ಷನ್, ಕಾರವಾರ ಇನ್ನು 6 ಕಾಮಗಾರಿಗಳಿಗೆ ಟೆಂಡರ್ ಅನ್ನು ಕರೆಯಬೇಕಾಗಿದೆ

ಆ) ಗುತ್ತಿಗೆ ವಹಿಸಿರುವ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತಿದೆ ಮೇ ಕನ್ಸಲ್ಟಿಂಗ್ ಇಂಜನಿಯರಿಂಗ್ ಸರ್ವೀಸ್ (ಐ) ಲಿಮಿಟೆಡ್‌ರವರು ಈ ಯೋಜನೆಗೆ ವಿನ್ಯಾಸ ಮತ್ತು ಮೇಲ್ವಿಚಾರಣೆ ಇಂಜಿನಿಯರಿಂಗ್ ಸಲಹೆಗಾರರಾಗಿದ್ದು ಇವರು ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ಇಂಜಿನಿಯರ್‌ಗಳು ಜಂಟಿಯಾಗಿ ಕಾಮಗಾರಿಗಳ ಉಸ್ತುವಾರಿ ನೋಡುತ್ತಿದ್ದು ಕಾಮಗಾರಿ ಗುಣಮಟ್ಟ ಮತ್ತು ಕಾಮಗಾರಿ ಪ್ರಗತಿಯನ್ನು ನಿರ್ವಹಿಸುತ್ತಿದ್ದಾರೆ ಈ ಕಾಮಗಾರಿಗೆ ಬಳಸುವ ಎಲ್ಲಾ ಸಾಮಗ್ರಿಗಳ ಗುಣಮಟ್ಟವನ್ನು ಪರೀಕ್ಷಿಸಿ ಗುಣ ಹೊಂದಿದ ಸಾಮಗ್ರಿಗಳನ್ನು ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಇದಲ್ಲದೆ ಮೆ ಟಾರ್‌ಸ್ಟೀಲ್ ರಿಸರ್ಚ್ ಫೌಂಡೇಷನ್ ಇಂಡಿಯಾ, ಇವರನ್ನು ಒಂದು ಸ್ವತಂತ್ರ ಸಂಸ್ಥೆಯಾಗಿ ಅಂದರೆ ಮೂರನೇ ಸಂಸ್ಥೆಯಾಗಿ ಗುಣಮಟ್ಟ ಕಾಯ್ದುಕೊಳ್ಳಲು ಕಾಲಕಾಲಕ್ಕೆ ತಪಾಸಣೆ ಮಾಡಲು ನೇಮಿಸಲಾಗಿದ್ದು, ಅವರುಗಳು ಕಾಲಕಾಲಕ್ಕೆ ತಪಾಸಣೆ ನಡೆಸಿ ಕಂಡು ಬರುವ ಲೋಪದೋಷಗಳನ್ನು ಸರಿಪಡಿಸಲಾಗುತ್ತಿದೆ ಯಾವ ಗುತ್ತಿಗೆದಾರರು ಕೆಲಸವನ್ನು ಬಿಟ್ಟು ಹೋಗಿರುವುದಿಲ್ಲ ಕೆಲವು ಕೆಲಸಗಳು ನಿಧಾನಗತಿಯಲ್ಲಿ ನಡೆಯುತ್ತಿರುವುದು ಕಂಡುಬಂದಿದ್ದು ನಿಗದಿತ ಪ್ರಗತಿ ಸಾಧಿಸಲು ಗುತ್ತಿಗೆದಾರರಿಗೆ ನೋಟೀಸ್ ಸಹ ಜಾರಿಗೊಳಿಸಲಾಗಿದೆ ಮೆ ಶ್ರೀರಾಮ್ ಇಂಜಿನಿಯರಿಂಗ್ ಕಂ. ಲಿ. ಮತ್ತು ಮೆ ವೋಲ್ಟಾಸ್ ಲಿ. ಈ ಇಬ್ಬರು ಗುತ್ತಿಗೆದಾರರ ಕಾಮಗಾರಿಗಳು ಬಹಳ ನಿಧಾನವಾಗಿದ್ದು ಇವರಿಗೆ ನೋಟೀಸ್ ಜಾರಿ ಮಾಡಿ ದಂಡವನ್ನು ಸಹ ವಿಧಿಸಲಾಗಿದೆ ಈ ಕಾಮಗಾರಿಗಳಲ್ಲಿ ಸಾಕಷ್ಟು ಪ್ರಗತಿ ಕಂಡು ಬರದೇ ಇದ್ದಲ್ಲಿ ಗುತ್ತಿಗೆ ಕರಾರಿನಂತೆ ದಂಡ ವಿಧಿಸಿ ಗುತ್ತಿಗೆ ರದ್ದುಪಡಿಸಿ ಮರು ಟೆಂಡರ್ ಕರೆದು ಕಾಮಗಾರಿಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು

ತಿಕೋಟ ಕ್ಷೇತ್ರದಲ್ಲಿ 110 11 ಕೆವಿ ಸ್ಟೇಷನ್ ಸ್ಥಾಪಿಸುವ ಬಗ್ಗೆ

57 (261) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ತಾಲ್ಲೂಕಿನ ತಿಕೋಟದಲ್ಲಿ 110 ಮತ್ತು 11 ಕೆವಿ ಸ್ಟೇಷನ್ ಸ್ಥಾಪಿಸುವ ಕೆಲಸ ಯಾವಾಗ ಮಂಜೂರಾಗಿದೆ

ಆ) ಸ್ಟೇಷನ್ ಸ್ಥಾಪಿಸುವ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗಿದೆ

ಇ) ಈಗ ಕೆಲಸವು ಯಾವ ಹಂತದಲ್ಲಿ ಪ್ರಗತಿಯಲ್ಲಿದೆ

ಈ) ಸ್ಟೇಷನ್ ಸ್ಥಾಪಿಸುವ ಕಾರ್ಯದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು

ಉ) ಸ್ಟೇಷನ್ ಕೆಲಸವನ್ನು ಪ್ರಾರಂಭಿಸಲು ಮತ್ತು ಪೂರ್ತಿಗೊಳಿಸಲು ಇದ್ದ ನಿರ್ದಿಷ್ಟ ಕಾಲ ಮಿತಿಯಾದರೂ ಏನೂ

ಊ) ಹಾಗಿದ್ದರೆ, ಯಾವ ಕಾಲಮಿತಿಯೊಳಗಾಗಿ ಸ್ಟೇಷನ್ ಕೆಲಸವನ್ನು ಪೂರ್ತಿಗೊಳಿಸಲಾಗುವುದು

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ), ಆ) ಮತ್ತು ಇ) ವಿಜಾಪುರ ತಾಲ್ಲೂಕಿನ ತಿಕೋಟಾದಲ್ಲಿ ಒಂದು 110 ಕೆ ವಿ ವಿದ್ಯುತ್ ಸ್ಟೇಷನ್ನನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ದಿನಾಂಕ 14-10-1999 ರಲ್ಲಿ ಅನುಮೋದನೆ ನೀಡಿರುತ್ತದೆ

ಈ ವಿದ್ಯುತ್ ಸಬ್-ಸ್ಟೇಷನ್ ಕಾಮಗಾರಿಯನ್ನು ಈಗಾಗಲೇ "ಟರ್ನ್ ಕೀ" ಆಧಾರದ ಮೇಲೆ ದಿನಾಂಕ 28-11-2002 ರಂದು ವಹಿಸಿಕೊಡಲಾಗಿದ್ದು, ವಿದ್ಯುತ್ ಸಬ್-ಸ್ಟೇಷನ್ನಿನ ಬಹುತೇಕ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಕೆಲವು ಮುಕ್ತಾಯದ ಹಂತದಲ್ಲಿರುತ್ತದೆ

ಈ) ಸದರಿ ಸಬ್-ಸ್ಟೇಷನ್ನಿಗೆ ಸಂಬಂಧಪಟ್ಟಂತೆ ಮೊದಲು ಪ್ರಸರಣ ಮಾರ್ಗದ ಕಾಮಗಾರಿಯನ್ನು "ಟರ್ನ್ ಕೀ" ಆಧಾರದ ಮೇಲೆ ಬಿ ಎಸ್ ಇ ಎಸ್ ಗುತ್ತಿಗೆದಾರರಿಗೆ ವಹಿಸಲಾಗಿತ್ತು ಆದರೆ ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಸಕಾಲದಲ್ಲಿ ಪ್ರಾರಂಭಿಸದೇ ಇದ್ದುದರಿಂದ ಅವರ ಗುತ್ತಿಗೆಯನ್ನು ರದ್ದುಗೊಳಿಸಿ ದೀಪಕ್ ಕೇಬಲ್ಸ್ ಗುತ್ತಿಗೆದಾರರಿಗೆ ದಿನಾಂಕ 24-11-2002 ರಂದು ವಹಿಸಲಾಗಿದ್ದು ಕೆಲಸವು ಈಗ ಪ್ರಗತಿಯಲ್ಲಿದೆ

ಉ) 110/11 ಕೆ ವಿ ಸಬ್ ಸ್ಟೇಷನ್ ಸ್ಥಾಪನೆಗಾಗಿ ಸಾಮಾನ್ಯವಾಗಿ ನಿಗದಿಪಡಿಸುವ ಕಾಲಮಿತಿಯು ಕಾರ್ಯನಿರ್ವಹಿಸಲು ನೀಡಲಾಗುವ ಆದೇಶದ ದಿನಾಂಕದಿಂದ 12 ತಿಂಗಳು

ಊ) ಸದರಿ ಸಬ್ ಸ್ಟೇಷನ್ನುಗಳ ಕಾಮಗಾರಿಯನ್ನು ಮಾರ್ಚ್-2004ರ ಅಂತ್ಯದೊಳಗೆ ಪೂರ್ಣಗೊಳಿಸಿ ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ

ಉತ್ತರ ಕರ್ನಾಟಕದ ಹೈಕೋರ್ಟ್ ಪೀಠ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು

58 (262) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂದು ಬೇಡಿಕೆ ಸರ್ಕಾರದ ಮುಂದೆ ಇದ್ದು ಪೀಠ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ

ಆ) ಪೀಠ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ ಯಾವುದು ಸೂಕ್ತ ಸ್ಥಳವೆಂದು ಗುರುತಿಸಲಾಗಿದೆಯೇ

ಈ) ಹಾಗಿದ್ದರೆ ಪೀಠ ಸ್ಥಾಪಿಸುತ್ತಿರುವುದನ್ನು ಏತಕ್ಕಾಗಿ ವಿಳಂಬ ಮಾಡಲಾಗುತ್ತಿದೆ

ಉ) ಸರ್ಕಾರ ಪೀಠ ಸ್ಥಾಪಿಸುವುದಕ್ಕಾಗಿ ಹಾಕಿಕೊಂಡ ನಿರ್ದಿಷ್ಟವಾದ ಕಾಲ ಮಿತಿ ಏನು?

ಶ್ರೀ ಎಸ್ ಎಂ ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಹೌದು

ಆ) ಗೌರವಾನ್ವಿತ ಮುಖ್ಯ ನ್ಯಾಯಾಧೀಶರು ಹೈಕೋರ್ಟ್ ಪೀಠ ಸ್ಥಾಪಿಸಲು ಉತ್ತರ ಕರ್ನಾಟಕದ ಭಾಗದಲ್ಲಿ ಸ್ಥಳವನ್ನು ಆಯ್ಕೆ ಮಾಡಿದ ನಂತರ ಆ ಸ್ಥಳದಲ್ಲಿ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಲು ಸರ್ಕಾರ ಬದ್ಧ ವಾಗಿದ್ದು ಇದಕ್ಕಾಗಿ 2003-04 ರ ಸಾಲಿನ ಆಯವ್ಯಯದಲ್ಲಿ ರೂ 20 00 ಕೋಟಿಗಳ ಅನುದಾನವನ್ನು ಒದಗಿಸಿದೆ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ